# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 176
ಸದಸ್ಯರ ಹೆಸರು : ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 14-02-2023
ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ ಎಷ್ಟು; (ಕಳೆದ ಐದು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ವರದಿಯಾದ ಬಾಲ್ಯವಿವಾಹ ಪ್ರಕರಣಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ವಿವಾಹ ನೋಂದಣಿ ಅಧಿಕಾರವನ್ನು ಗ್ರಾಮ ಪಂಚಾಯತಿ ಅಧಿಕಾರ ವ್ಯಾಪ್ತಿಗೆ ತರುವ ಪ್ರಸ್ತಾವನೆ ಸರ್ಕಾರ ಮುಂದಿದೆಯೇ; | ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಗ್ರಾಮ ಪಂಚಾಯತ್ ಹಂತದ ವಿವಾಹ ನೋಂದಣಿ ಅಧಿಕಾರಿಗಳನ್ನಾಗಿ ನೇಮಿಸಿ ಸಂಖ್ಯೆ: ಮಮಇ 87 ಮಮಅ 2022 ದಿನಾಂಕ: 16-04-2022ರ ಅಧಿಸೂಚನೆಯಲ್ಲಿ ಆದೇಶ ಹೊರಡಿಸಲಾಗಿದೆ. |
| ಇ) | ಬಾಲ್ಯ ವಿವಾಹವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಾಲ್ಯ ವಿವಾಹ ತಡೆಗೆ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳು ಈ ಕೆಳಗಿನಂತಿವೆ.<br>• ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ನ್ನು ರಾಜ್ಯಾದಂತ ಜಾರಿಗೊಳಿಸಲಾಗುತ್ತಿದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಬಲಪಡಿಸಲು ಕರ್ನಾಟಕ ರಾಜ್ಯವು ಕಾಯ್ದೆಗೆ ತಿದ್ದುಪಡಿಯನ್ನು ತಂದಿದ್ದು, ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ 2016ನ್ನು ದಿನಾಂಕ: 03-03-2018ರಿಂದ ಜಾರಿಗೆ ತಂದಿರುತ್ತದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಳಗೊಂಡಂತೆ ಪ್ರಮುಖ 10 ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ (ರಾಜ್ಯ/ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ವ್ಯಾಪ್ತಿಯ) 58,000 ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ಅವರ ಅಧಿಕಾರದ ವ್ಯಾಪ್ತಿಯನ್ನು ನಿಗದಿಪಡಿಸಿ ವಿವಿಧ ಹಂತಗಳಲ್ಲಿ ನೇಮಿಸಿ 2018ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅವರ ಪ್ರಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ. 10 ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ.<br>• 2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಬಾಗೀದಾರರ ಇಲಾಖೆಗಳ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಅವರ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗಿರುವ ಕ್ರಮಬದ್ಧ ಕಾರ್ಯವಿಧಾನ (SOP) ಕುರಿತಂತೆ ತರಬೇತಿಗಾಗಿ ಪ್ರತಿ ಜಿಲ್ಲೆಗೆ ರೂ. 50,000/-ಗಳಂತೆ ಒಟ್ಟು ರೂ. 15.50 ಲಕ್ಷಗಳ ಅನುದಾನವನ್ನು 31 ಜಿಲ್ಲೆಗಳಿಗೆ ಬಿಡುಗಡೆ ಮಾಡಿ ತರಬೇತಿ ಹಮ್ಮಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. |

| | | |
|---|---|---|
| | | • 2022-23ನೇ ಸಾಲಿನಲ್ಲಿ ಆದೇಶ ಸಂಖ್ಯೆ ಮಮಅಇ: ಬಾವಿನಿಕೋ ಆಯವ್ಯಯ 01:2022-23. ದಿನಾಂಕ: 05-01-2023ರಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಯುವಜನಾಂಗದಲ್ಲಿ ಅರಿವು ಮೂಡಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಯುವ ಮೇಳ ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯದ 4 ವಿಭಾಗಗಳಲ್ಲಿನ ಬೆಳಗಾವಿ, ಚಾಮರಾಜನಗರ, ಯಾದಗಿರಿ ಮತ್ತು ತುಮಕೂರು ಜಿಲ್ಲೆಗಳಿಗೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 20.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸುರಕ್ಷಿಣೆ- ಬಾಲ್ಯವಿವಾಹದಿಂದ ಮಕ್ಕಳ ರಕ್ಷಣೆ ಹಾಗೂ ಅನುಸರಣಾ ಮಾಹಿತಿ ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ಹಾಗೂ ಮೇಲ್ವಿಚಾರಣೆಗಾಗಿ ಸುರಕ್ಷಿಣೆ ಎಂಬ ವೆಬ್ ಪೋರ್ಟಲ್ ನ್ನು NIC ಸಹಯೋಗದಿಂದ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ವೆಬ್ ಪೋರ್ಟಲ್ ಕುರಿತು ಪ್ರಕರಣಗಳ ದತ್ತಾಂಶ ಸಂಗ್ರಹಣೆಗೆ ಹಾಗೂ ಮೇಲ್ವಿಚಾರಣೆಗೆ ಅನುಕೂಲವಾಗುತ್ತಿದ್ದು, ಸದ್ಯದಲ್ಲಿಯೇ ಚಾಲನೆಗೆ ಕ್ರಮವಹಿಸಲಾಗುತ್ತಿದೆ.<br><br>• ಬಾಲ್ಯವಿವಾಹವನ್ನು ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಸ್ಫೂರ್ತಿ ಯೋಜನೆಯನ್ನು ರಾಜ್ಯದ ಇತರೆ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ 11 ತಾಲ್ಲೂಕು (ಹುನಗುಂದ, ಸವದತ್ತಿ, ಗೋಕಾಕ್, ಹುಕ್ಕೇರಿ, ಚಿಂಚೋಳಿ, ಜೇವರ್ಗಿ, ಲಿಂಗಸುಗೂರು, ದೇವದುರ್ಗ, ಮುದ್ದೇಬಿಹಾಳ, ಇಂಡಿ)ಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ ಮಮಇ 95 ಮಮಅ 2022, ದಿನಾಂಕ: 24-01-2023ರನ್ವಯ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಮಮಇ 18 ಮಮಅ 2023**

Halappa

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

## ಅನುಬಂಧ-1

### ಶ್ರೀ ರಾಜೇಂದ್ರ ರಾಜಣ್ಣ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 190 (176) ಕ್ಕೆ ಉತ್ತರ
### ಕಳೆದ 5 ವರ್ಷಗಳಿಂದ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ

| ಕ್ರ. ಸಂ | ಜಿಲ್ಲೆಯ ಹೆಸರು | 2017-18 | | | | 2018-19 | | | | 2019-20 | | | | 2020-21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| *1* | *2* | *3* | *4* | *5* | *6* | *7* | *8* | *9* | *10* | *11* | *12* | *13* | *14* | *15* | *16* | *17* | *18* | *19* | *20* | *21* | *22* |
| 1 | ಬಾಗಲಕೋಟೆ | 25 | 25 | 0 | 0 | 43 | 36 | 7 | 0 | 65 | 60 | 5 | 0 | 113 | 95 | 18 | 10 | 177 | 138 | 39 | 39 |
| 2 | ಬೆಂಗಳೂರು (ಗ್ರಾ) | 66 | 45 | 21 | 19 | 8 | 7 | 1 | 1 | 5 | 5 | 0 | 0 | 74 | 66 | 8 | 8 | 59 | 51 | 8 | 8 |
| 3 | ಬೆಂಗಳೂರು (ನ) | 115 | 104 | 11 | 8 | 27 | 22 | 5 | 2 | 20 | 17 | 3 | 2 | 43 | 34 | 8 | 8 | 51 | 38 | 13 | 12 |
| 4 | ಬೆಳಗಾವಿ | 52 | 39 | 13 | 2 | 150 | 138 | 12 | 0 | 144 | 132 | 12 | 6 | 187 | 169 | 18 | 13 | 140 | 124 | 16 | 16 |
| 5 | ಬಳ್ಳಾರಿ | 72 | 64 | 8 | 8 | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 6 | ಬೀದರ್ | 136 | 132 | 4 | 0 | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 7 | ವಿಜಯಪುರ | 27 | 27 | 0 | 0 | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| 8 | ಚಾಮರಾಜನಗರ | 32 | 32 | 0 | 0 | 21 | 21 | 0 | 0 | 25 | 22 | 3 | 3 | 87 | 86 | 1 | 1 | 72 | 67 | 5 | 5 |
| 9 | ಚಿಕ್ಕಬಳ್ಳಾಪುರ | 13 | 11 | 2 | 1 | 56 | 49 | 7 | 4 | 113 | 104 | 9 | 9 | 140 | 128 | 13 | 13 | 136 | 109 | 27 | 27 |
| 10 | ಚಿಕ್ಕಮಗಳೂರು | 33 | 32 | 1 | 1 | 24 | 22 | 2 | 2 | 42 | 37 | 5 | 5 | 109 | 94 | 15 | 11 | 104 | 87 | 17 | 17 |
| 11 | ಚಿತ್ರದುರ್ಗ | 72 | 63 | 9 | 4 | 57 | 54 | 3 | 0 | 57 | 55 | 2 | 2 | 132 | 128 | 4 | 4 | 137 | 128 | 9 | 8 |
| 12 | ದಕ್ಷಿಣ ಕನ್ನಡ | 7 | 6 | 1 | 1 | 11 | 9 | 2 | 0 | 15 | 11 | 4 | 4 | 21 | 20 | 1 | 1 | 12 | 11 | 1 | 1 |
| 13 | ದಾವಣಗೆರೆ | 15 | 14 | 1 | 1 | 72 | 70 | 2 | 1 | 60 | 59 | 1 | 1 | 79 | 72 | 7 | 7 | 73 | 67 | 6 | 6 |
| 14 | ಧಾರವಾಡ | 48 | 43 | 5 | 0 | 9 | 9 | 0 | 0 | 13 | 11 | 2 | 1 | 11 | 11 | 0 | 0 | 32 | 22 | 10 | 10 |
| 15 | ಗದಗ | 91 | 85 | 6 | 0 | 22 | 22 | 0 | 0 | 32 | 31 | 1 | 1 | 60 | 57 | 3 | 3 | 48 | 46 | 2 | 2 |
| 16 | ಕಲಬುರ್ಗಿ | 75 | 70 | 5 | 3 | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 17 | ಹಾಸನ | 41 | 37 | 4 | 3 | 40 | 38 | 2 | 0 | 30 | 30 | 0 | 0 | 160 | 121 | 39 | 29 | 106 | 67 | 39 | 31 |
| 18 | ಹಾವೇರಿ | 154 | 150 | 4 | 6 | 24 | 23 | 1 | 0 | 31 | 31 | 0 | 0 | 52 | 52 | 0 | 0 | 71 | 71 | 0 | 0 |
| 19 | ಕೊಡಗು | 55 | 55 | 0 | 0 | 10 | 8 | 2 | 0 | 20 | 19 | 1 | 1 | 10 | 8 | 2 | 1 | 10 | 7 | 3 | 3 |
| 20 | ಕೋಲಾರ | 19 | 19 | 0 | 0 | 17 | 17 | 0 | 0 | 38 | 37 | 1 | 1 | 94 | 93 | 1 | 2 | 74 | 68 | 6 | 6 |
| 21 | ಕೊಪ್ಪಳ | 4 | 4 | 0 | 0 | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 22 | ಮಂಡ್ಯ | 24 | 24 | 0 | 0 | 47 | 29 | 18 | 11 | 58 | 30 | 28 | 26 | 76 | 42 | 34 | 28 | 142 | 66 | 76 | 70 |
| 23 | ಮೈಸೂರು | 22 | 21 | 1 | 0 | 73 | 69 | 4 | 5 | 91 | 84 | 7 | 7 | 277 | 246 | 31 | 31 | 238 | 205 | 33 | 33 |
| 24 | ರಾಯಚೂರು | 10 | 7 | 3 | 3 | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 25 | ರಾಮನಗರ | 24 | 24 | 0 | 0 | 37 | 30 | 7 | 2 | 90 | 59 | 31 | 18 | 129 | 109 | 20 | 7 | 92 | 81 | 11 | 9 |
| 26 | ಶಿವಮೊಗ್ಗ | 7 | 7 | 0 | 0 | 55 | 42 | 13 | 3 | 65 | 48 | 17 | 17 | 125 | 107 | 18 | 18 | 94 | 76 | 18 | 18 |
| 27 | ತುಮಕೂರು | 46 | 45 | 1 | 1 | 50 | 45 | 5 | 5 | 55 | 51 | 4 | 4 | 130 | 123 | 7 | 7 | 111 | 100 | 11 | 11 |
| 28 | ಉಡುಪಿ | 26 | 24 | 2 | 0 | 2 | 1 | 1 | 1 | 1 | 1 | 0 | 0 | 1 | 1 | 0 | 0 | 0 | 0 | 0 | 0 |
| 29 | ಉತ್ತರ ಕನ್ನಡ | 38 | 38 | 0 | 0 | 9 | 7 | 2 | 1 | 12 | 12 | 0 | 0 | 21 | 20 | 1 | 1 | 16 | 15 | 1 | 1 |
| 30 | ಯಾದಗಿರಿ | 4 | 4 | 0 | 0 | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| 31 | ವಿಜಯನಗರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| **Total** | | **1353** | **1251** | **102** | **61** | **1394** | **1275** | **119** | **48** | **1779** | **1623** | **156** | **130** | **3007** | **2711** | **296** | **239** | **2819** | **2401** | **418** | **389** |

# ಕರ್ನಾಟಕ ಸರ್ಕಾರ

ಸಂ: ಮಮಇ 87 ಮಮಅ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 16 04 2022

## ಅ ಧಿ ಸೂ ಚ ನೆ

ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ವಿವಿಧ ನಿಬಂಧನೆಗಳು) ಕಾಯಿದೆ, 1976 (ಕರ್ನಾಟಕ ಅಧಿನಿಯಮ 2, 1984) ರ ಕಲಂ 4(1) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹಾಗೂ ಅಧಿಸೂಚನೆ ಸಂಖ್ಯೆ WCD 100 SWW 2006, ದಿನಾಂಕ: 07-11-2007ಅನ್ನು ಮುಂದುವರೆಸಿ, ಕರ್ನಾಟಕ ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಗ್ರಾಮ ಪಂಚಾಯತ್ ಹಂತದ ವಿವಾಹ ನೋಂದಣಾಧಿಕಾರಿಗಳನ್ನಾಗಿ ಈ ಮೂಲಕ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

G. H. Saroja 16/04/2022
(ಜಿ.ಹೆಚ್.ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು 100 ಪ್ರತಿಗಳನ್ನು ಪೂರೈಸಲು ವಿನಂತಿಯೊಂದಿಗೆ.

**ಪ್ರತಿಗಳು**

1. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು- 560 001
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಂದಾಯ ಇಲಾಖೆ ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನಗಳ ಇಲಾಖೆ
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಮತ್ತು ಕಮಿಷನರ್ ಆಫ್ ಸ್ಟಾಂಪ್ಸ್, ಕಾವೇರಿ ಭವನ ಬೆಂಗಳೂರು
6. ರಿಜಿಸ್ಟ್ರಾರ್, ಕರ್ನಾಟಕ ಹೈಕೋರ್ಟ್, ಬೆಂಗಳೂರು
7. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
8. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
10. ಪ್ರೆಸ್ ಟೇಬಲ್
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

(ಕ್ರ.ಸಂ 8, 9 & 10 ನಿರ್ದೇಶಕರು, ಮಮಅ ಇವರ ಮುಖಾಂತರ)